ಮೂವತ್ತು ವರುಷಗಳ ಹಿಂದೆ ಒಂದು ಕಿರು ಕಲ್ಪನೆಯಾದರೂ ಇದ್ದಿತ್ತೆ: ಈಗ ಹೀಗೆ ಬರುತ್ತೇನೆ ಎಂದು? ಮನಸ್ಸಿನಲ್ಲಿ ಸುಳಿದ ಭಾವಕ್ಕೆ ಅದೇ ಬದುಕಿನ ಘಟ್ಟದಲ್ಲಿ ಬರುವ ಆಕಸ್ಮಿಕಗಳು ಎಂದುಕೊಳ್ಳುತ್ತ ಎದುರಿಗಿನ ಘಟ್ಟದಲ್ಲಿ ಹಬ್ಬಿ ನಿಂತ ಮನೆಗಳನ್ನು ನೋಡಿದೆ. ಪ್ರಾಯಶಃ ಮನುಷ್ಯನ ಬದುಕಿನಲ್ಲಿ ಏನೇನೆಲ್ಲಾ ಬದಲಾದರೂ ಪ್ರಕೃತಿಯ ಮೂಲ ಸ್ವರೂಪವಂತು ಬದಲಾಗದು. ಹೆಚ್ಚೆಂದರೆ ಮನುಷ್ಯ ಗುಡ್ಡ ಕಡಿದು ಸಮತಟ್ಟು ಮಾಡಿಯಾನು; ಗದ್ದೆ ತುಂಬಿ ಸೈಟು ಮಾಡಿಯಾನು, ಅಷ್ಟೆ. ಅದೇ ದಿಕ್ಕು, ಅದೇ ದಿಸೆ, ಎಂದುಕೊಳ್ಳುತ್ತಿರುವಷ್ಟರಲ್ಲಿ ಹಿಂದಿನಿಂದ ಬಸ್ಸೊಂದು ಕೀಚಲು ದನಿಯಲ್ಲಿ ಒದರಿಕೊಳ್ಳುವುದು ಕೇಳಿಸಿ ಬೆಚ್ಚಿ ಲಗೇಜ್ ಎತ್ತಿಕೊಂಡು ಬಸ್ ನಿಲ್ದಾಣದ ಒಳಹೊಕ್ಕೆ. ಒಂದು ಸೂಟ್‌ಕೇಸು, ಒಂದು ಬ್ಯಾಕ್‌ಪ್ಯಾಕು. ಇಲ್ಲಿ ಕೂಲಿಯವರಂತು ಸಿಗಲಿಕ್ಕಿಲ್ಲ, ಹೇಗಪ್ಪ ಹೊತ್ತುಕೊಂಡು ಹೋಗುವುದು? ಜೊತೆಗೇ ಹೊಟ್ಟೆ ತಾನು ಶೂನ್ಯನಾಗುತ್ತಿದ್ದೇನೆ ಎನ್ನುವ ಸೂಚನೆಯನ್ನೂ ಕೊಟ್ಟಿತು. ಬಸ್‌ಸ್ಟ್ಯಾಂಡ್ ಹೊಟೇಲಿನತ್ತ ನೋಡಿದೆ. ಯಾಕೋ ಯಾವತ್ತಿನಂತೆ ಬಸ್‌ಸ್ಟ್ಯಾಂಡ್ ಹೊಟೇಲಿನಲ್ಲಿ ತಿನ್ನುವ ಮನಸ್ಸಾಗಲಿಲ್ಲ. ಈಗೇನು ಇಲ್ಲಿ ಒಂದೆರಡಾದರು ಒಳ್ಳೇ ಹೊಟೇಲುಗಳಿರಬಹುದು ಎನ್ನಿಸಿದರು ಬಸ್ಸಿನಲ್ಲಿ ಇಡೀ ರಾತ್ರಿ ತಲೆಯ ತುಂಬಾ ತುಂಬಿಕೊಂಡ ರಾಮಣ್ಣನ ನೆನಪು ಮತ್ತೆ ಮರುಕಳಿಸಿ ಅಲ್ಲಿಗೇ ಮೊದಲು ಹೋಗುವುದು ಎಂದು ತೀರ್ಮಾನಿಸಿದೆ.

ಹೌದು, ಅದೇನೂ ಬಸ್‌ಸ್ಟ್ಯಾಂಡಿನಿಂದ ದೂರವಲ್ಲ. ನಿಲ್ದಾಣದ ಎಡಭಾಗದಲ್ಲಿ ಸಾಗುವ ರಾಜ ರಸ್ತೆ ಹಿಡಿದು ಹೋಗಿ ನಾಲ್ಕಾರು ಅಂಗಡಿ ದಾಟಿದರೆ ಸಿಗುವುದೇ ಹೊಟೇಲ್ ವಿಜಯಲಕ್ಷ್ಮಿ, ಪ್ರೊಪ್ರೈಟರ್ ರಾಮ ಮಡಿವಾಳ ಎಂದು ತಗಡಿನ ಮೇಲೆ ಕರೀ ಅಕ್ಷರದಲ್ಲಿ ಬರೆದ ಬೋರ್ಡು. ಈಗ ಚೆಂದದ ಬೋರ್ಡೇ ಹಾಕಿರಬಹುದು...

ಜಾಗ ಹುಡುಕುವುದು ಕಷ್ಟವಾಗಲಿಲ್ಲವಾದರೂ ಹೊಟೇಲ್ ಹುಡುಕುವುದು ಕಷ್ಟವೇ ಆಯಿತು. ಖಾಲಿಯಿದ್ದ ಅಕ್ಕಪಕ್ಕದ ಜಾಗೆಯನ್ನೆಲ್ಲ ಹೊಸ ಹೊಸ ಅಂಗಡಿಗಳು ಆಕ್ರಮಿಸಿಕೊಂಡಿದ್ದರೆ ಹೊಟೇಲು ಮತ್ತೂ ಕಿರಿದಾಗಿ ಒಂದು ಕೋವಿನಲ್ಲಷ್ಟೆ ಉದ್ದಕ್ಕೆ ಚಾಚಿಕೊಂಡಂತಿತ್ತು. ಒಂದು ಪಕ್ಕದಲ್ಲಿ ಮಾರವಾಡಿಯೊಬ್ಬನ ದೊಡ್ಡ ಬಟ್ಟೆ ಅಂಗಡಿ, ಮತ್ತೊಂದು ಪಕ್ಕ ದೊಡ್ಡ ಎಲೆಕ್ಟ್ರಿಕಲ್ ಶಾಪ್ ಇದ್ದು ಹೊಟೇಲ್ ಎಲ್ಲಿ ಎಂದು ಕೇಳಿಯೇ ಹೋಗಬೇಕಾಯಿತು. ಹಾಕಿದ್ದ ಹಳೆಯ ಬೋರ್ಡೂ ಜಂಗು ತಿಂದು ಅಸ್ಥಿಪಂಜರವಾದದ್ದನ್ನು ನೋಡಿದಾಗ ರಾಮಣ್ಣ ಹೇಗಿದ್ದಿರಬಹುದು ಎಂದು ಬಸ್ಸಿನಲ್ಲಿ ಚಿತ್ರಿಸಿಕೊಂಡ ನೆನಪುಗಳು ಪುನರ್‌ಸಮೀಕ್ಷೆಗೆ ಒಳಪಡುವಂತಾಗಿ ಮನಸ್ಸು ಕಳವಳಕ್ಕೀಡಾಯಿತು.

ಹೊಟೇಲಿನ ಒಳಹೊಕ್ಕೆ. ಹಳೆಯ ಕಾಲದ ನಾಲ್ಕಾರು ಮೇಜುಗಳು. ಅವುಗಳ ಎದುರಾಬದುರಾ ಎರಡೆರಡು ಕುರ್ಚಿಗಳು. ಅಲ್ಲೊಂದೆರಡು ಇಲ್ಲೊಂದೆರಡು ಮೇಜಿನೆದುರು ಹಮಾಲಿಗಳು ಚಹಾ ಕುಡಿಯುತ್ತ ಕುಳಿತಿದ್ದರು. ಜೀನ್ಸ್ ಪ್ಯಾಂಟು, ಉದ್ದ ತೋಳಿನ ಶುಭ್ರ ಬಿಳಿಯಂಗಿ ಹಾಕಿದವನು ಒಳಹೊಕ್ಕದ್ದನ್ನ ಕಂಡು ತಮಗಾದ ಅಚ್ಚರಿಯನ್ನು ಮುಖದಲ್ಲಿ ತೋರಿಸದಿರಲು ಅವರು ಹೆಣಗುವುದನ್ನು ನೋಡುತ್ತ ಖಾಲಿಯಿದ್ದ ಟೇಬಲ್ ಒಂದರ ಎದುರು ಕುಳಿತೆ. ಮೊದಲು ಏನಾದರು ತಿನ್ನಬೇಕು, ಬಳಿಕ ರಾಮಣ್ಣನ ಬಗ್ಗೆ ಕೇಳಿದರಾಯಿತು; ಹೆಚ್ಚಿನಂಶ ಆತ ಮನೆಯಿಂದ ಬಂದಿರಲಿಕ್ಕಿಲ್ಲ ಎಂದುಕೊಳ್ಳುತ್ತ ತಿಂಡಿಗಳನ್ನು ಪೇರಿಸಿಟ್ಟ ಗ್ಲಾಸಿನ ಕಪಾಟು ನೋಡಿದರೆ ಕೋಳುಪ್ಪರಕ್ಕೆ ಪೇರಿಸಿಟ್ಟ ಚೂಡಾ ಅವಲಕ್ಕಿ, ಕಾರಾಶೇವು, ಪಕ್ಕದ ಪ್ಲೇಟೊಂದರಲ್ಲಿ ಜೋಡಿಸಿಟ್ಟ ಹತ್ತು ಹದಿನೈದು ಮೈಸೂರು ಪಾಕುಗಳ ಹೊರತು ಮತ್ತೇನು ಕಾಣಲಿಲ್ಲ.